2017 ಕ.ತೀ.ವ. 910

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ

## ಡಾ॥ ಮಹದೇವಯ್ಯ –ವಿರುದ್ಧ– ರಿಜಿಸ್ಟ್ರಾರ್, ಮೈಸೂರು ವಿಶ್ವವಿದ್ಯಾಲಯ ಮತ್ತು ಮತ್ತೊಬ್ಬರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಅರ್ಜಿದಾರರು ಮಾರ್ಗದರ್ಶನ ಮಾಡುವುದನ್ನು 5 ವರ್ಷಗಳವರೆಗೆ ಅಮಾನತ್ತುಗೊಳಿಸಿ ಮತ್ತು ಅದರ ಆಧಾರದ ಮೇಲೆ ವಿದ್ಯಾರ್ಥಿಯೊಬ್ಬನ ನೋಂದಣಿಯನ್ನು ರದ್ದುಗೊಳಿಸಿದ ಎದುರುದಾರ/ವಿಶ್ವವಿದ್ಯಾನಿಲಯದ ತೀರ್ಮಾನವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

ಕಾರಣ ಸೂಚನೆಯನ್ನು ವಿವರಿಸಲು ಅರ್ಜಿದಾರರಿಗೆ ಎದುರುದಾರರು ಸೂಕ್ತ ಅವಕಾಶವನ್ನು ನೀಡಿರುವುದಿಲ್ಲ. ಅರ್ಜಿದಾರರ ವಿರುದ್ಧವಾಗಲೀ ಅಥವಾ ಅವರ ಶಿಷ್ಯನ ವಿರುದ್ಧ ಕೃತಿಚೌರ್ಯದ ಬಗ್ಗೆ ಯಾವುದೇ ಫಿರ್ಯಾದು ನೀಡಿದ ಬಗ್ಗೆ ನಮೂದನೆಯಿರುವುದಿಲ್ಲ. ಈ ಎಲ್ಲ ಕಾರಣಗಳಿಂದ ಅರ್ಜಿದಾರರ ರಿಟ್ ಅರ್ಜಿಯನ್ನು ಪುರಸ್ಕರಿಸಿದ ಉಚ್ಚ ನ್ಯಾಯಾಲಯವು ಪ್ರಕರಣವನ್ನು ಹೊಸದಾಗಿ ಬಗೆಹರಿಸುವಂತೆ ಎದುರುದಾರರಿಗೆ ಹಿಂತಿರುಗಿ ಆದೇಶ ಮಾಡಲಾಗಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು:* | *ಪ್ಯಾರಾಗಳಲ್ಲಿ* |
|---|---|
| *1. ಐಎಲ್‌ಆರ್ 2007 ಕೆಎಆರ್ 112 ಡಾ॥ ಎಂ. ವೆಂಕಟರಮಣಪ್ಪ –ವಿರುದ್ಧ– ಛಾನ್ಸಲರ್, ಬೆಂಗಳೂರು ವಿಶ್ವವಿದ್ಯಾನಿಲಯ, ರಾಜಭವನ ಬೆಂಗಳೂರು–1 ಮತ್ತು ಇತರರು* | *(ಉಲ್ಲೇ) 13* |

* ರಿಟ್ ಅರ್ಜಿ ಸಂಖ್ಯೆ.: 22805/2016 (ಇಡಿಎನ್–ಆರ್‌ಇಎಸ್), ದಿನಾಂಕ: 2ನೇ ಮಾರ್ಚ್, 2017.

*2. ಐಎಲ್ಆರ್ 2013 ಕೆಎಆರ್ 209*
*ಶ್ರೀ ಪಿ.ಎಂ. ಪರಮೇಶ್ವರಮೂರ್ತಿ ಮತ್ತು ಇತರರು*
*–ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು (ಉಲ್ಲೇ) 14*

ಅರ್ಜಿದಾರರ ಪರ : ಶ್ರೀ ಟಿ.ಎಸ್. ವೆಂಕಟೇಶ್, ವಕೀಲರು
ಪ್ರತ್ಯರ್ಜಿದಾರರ ಪರ : ಶ್ರೀ ಟಿ.ಪಿ. ರಾಜೇಂದ್ರ ಕುಮಾರ್ ಸುಂಗೆ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಎಸ್. ಸುಜಾತ:**

ಅರ್ಜಿದಾರನು ಎರಡನೇ ಎದುರುದಾರರು ಹೊರಡಿಸಿದ ದಿನಾಂಕ 09–02–2016 ರ ಆದೇಶವನ್ನು ಆಕ್ಷೇಪಿಸಿರುವರು ಹಾಗೂ ದಿನಾಂಕ 19.02.2015 ರ (ಅನುಬಂಧ–ಎಸ್2) ಸಿಂಡಿಕೇಟ್ ಕೌನ್ಸಿಲ್ ಸಭೆಯಲ್ಲಿ ತೆಗೆದುಕೊಂಡ ಸಂ. 2015/6.24ರ ನಿರ್ಣಯವನ್ನು ಮತ್ತು ದಿನಾಂಕ 19.01.2016 ರ ಸಿಂಡಿಕೇಟ್ ಕೌನ್ಸಿಲ್ ಸಭೆಯಲ್ಲಿ ತೆಗೆದುಕೊಂಡ ಸಂ. 2016/1.19 ರ ನಿರ್ಣಯವನ್ನು ಎರಡನ್ನೂ ರದ್ದುಪಡಿಸುವಂತೆ ಕೋರಿರುತ್ತಾರೆ.

2. ಅರ್ಜಿದಾರನನ್ನು ಪಿಎಚ್‌ಡಿ ವಿನಿಯಮ 2010ರ ವಿನಿಮಯದ ಪ್ರಕಾರ ಮಾರ್ಗದರ್ಶಕನೆಂದು ಗುರ್ತಿಸಲಾಗಿದೆ. ಶ್ರೀ ಮಸಿಹ್ ಅನ್ಸಾರಿ ಡೆರ್ಝಿಪುಲಿ ಎಂಬೊಬ್ಬ ವ್ಯಕ್ತಿಯು ಅರ್ಜಿದಾರನನ್ನು ತನ್ನ ಡಾಕ್ಟರಲ್ ಪ್ರೋಗ್ರಾಂಗಾಗಿ ಮಾರ್ಗದರ್ಶಕರಾಗಿ ಆಯ್ಕೆಮಾಡಿಕೊಂಡಿದ್ದಾನೆ. ಸದರಿ ಶ್ರೀ ಮಸಿಹ್ ಅನ್ಸಾರಿ ಡೆರ್ಝಿಪುಲಿಗೆ ಸಂಶೋಧನೆಗೆ ಅನುಮತಿ ನೀಡಲಾಗಿತ್ತು ಮತ್ತು ಅವನ ಸಂಶೋಧನಾ ನೋಂದಣಿಯನ್ನು ದೃಢಪಡಿಸಲಾಯಿತು. ವಿದ್ಯಾರ್ಥಿಯು, ಪೂರ್ವ–ನೋಂದಣಿ ವಿಚಾರಗೋಷ್ಠಿ ಸಮಿತಿ ಮುಂದೆ ಹಾಜರಾಗಿ, ಸದರಿ ಸಮಿತಿಯು, ನೋಂದಣಿ ಕಾರ್ಯದ ಸಂಬಂಧ ಶಿಫಾರಸು ಮಾಡಲಾಯಿತು, "EFFECTS OF NATURAL

AND SYNTHETIC FLOCCULANTS ON SUGARCANE JUICE CLARIFICATION : A COMPARATIVE STUDY" ಗಾಗಿ 23.09.2013 ರಂದು ವಿಚಾರಗೋಷ್ಠಿ ಸಮಿತಿಯು, ಪ್ರೌಢಪ್ರಬಂಧ ಮತ್ತು ಆತನ ಸಂಶೋಧನೆಯು ತೃಪ್ತಿಕರವಾಗಿದೆಯೆಂದು ಅಭಿಪ್ರಾಯಪಟ್ಟಿತು ಮತ್ತು ಪರೀಕ್ಷಕರ ಪ್ರೌಢಪ್ರಬಂಧದ ಮೌಲ್ಯಮಾಪನಕ್ಕೆ ಶಿಫಾರಸು ಮಾಡಿದರು. ಶ್ರೀ ಮಸಿಹ್ ಅನ್ಸಾರಿ ಡೆಝುಪುಲಿಯವರು ಸಂಶೋಧನಾ ಕಾರ್ಯವನ್ನು ಇಬ್ಬರು ಹೊರಗಿನ ಪರೀಕ್ಷಕರಿಗೆ ಕಳುಹಿಸಲಾಗಿತ್ತು ಮತ್ತು ಸಂಶೋಧನೆಯನ್ನು ಪರೀಕ್ಷಕರು ಮೌಲ್ಯಮಾಪನ ಮಾಡಿದರು, ಆದಾಗ್ಯೂ ಕೆಲವು ಮಾರ್ಪಾಡುಗಳಿಗೆ ಸಲಹೆ ನೀಡಿದರು ಮತ್ತು ಮಾರ್ಪಾಡಿನ ಸೇರ್ಪಡೆಯಾದ ಮೇಲೆ ಪಿಎಚ್‌ಡಿಯ ಪದವಿಯ ಅಂಗೀಕಾರಕ್ಕಾಗಿ ಪ್ರೌಢಪ್ರಬಂಧವನ್ನು ಶಿಫಾರಸು ಮಾಡಿದರು. ತದನುಸಾರವಾಗಿ, ಹೊರಗಿನ ಪರೀಕ್ಷಕರ ಮೌಲ್ಯಮಾಪನವನ್ನು ಸಲಹೆ ನೀಡಲಾದ ಮಾರ್ಪಾಡುಗಳನ್ನು ಸೇರಿಸಿ, ಪರಿಷ್ಕೃತ ಪ್ರೌಢಪ್ರಬಂಧವನ್ನು ಸಲ್ಲಿಸಲಾಯಿತು ಮತ್ತು ಡಾಕ್ಟರಲ್ ಕಮಿಟಿಯು, ಸದರಿ ಶ್ರೀ ಮಸಿಹ್ ಅನ್ಸಾರಿ ಡೆಝುಪುಲಿಯವರು ತಮ್ಮ ಪ್ರೌಢಪ್ರಬಂಧವನ್ನು ಪರೀಕ್ಷಕರು ನೀಡಿದ ಸಲಹೆಗಳ ಪ್ರಕಾರ ತುಂಬಾ ಜಾಗರೂಕವಾಗಿ ಪರಿಷ್ಕರಿಸಿದ್ದಾರೆಂದು ನಿರ್ಧರಿಸಿದೆ ಮತ್ತು ಪಿಎಚ್‌ಡಿ ಪದವಿಗಾಗಿ ಶಿಫಾರಸು ಮಾಡಿದ್ದಾರೆ. ಈ ಮಧ್ಯೆ ಡಾ|| ತಂಗಮುತ್ತು ಎಂಬೊಬ್ಬರು ಪತ್ರಿಕೆಯಲ್ಲಿನ ಲೇಖನವನ್ನು ಕೃತಿಚೌರ್ಯ ಮಾಡಿದ್ದಾರೆಂದು ಮತ್ತು ವಿಶ್ವವಿದ್ಯಾನಿಲಯವು ಇಬ್ಬರು ತಜ್ಞರು ಎಂದರೆ ಡಾ|| ಕಬೀಲನ್ ಮತ್ತು ಡಾ|| ಎನ್‌ಬಿಎಲ್ ಪ್ರಸಾದ್ ಮಾಡಿದ ಕೃತಿಚೌರ್ಯದ ಆರೋಪವನ್ನು ಪರೀಕ್ಷಿಸಿದೆ.

3. ವಿಶ್ವವಿದ್ಯಾನಿಲಯವು ದಿನಾಂಕ 19.06.2015 ರ ತನ್ನ ಸಿಂಡಿಕೇಟ್ ಸಭೆ ಪ್ರಕಾರ, ಶ್ರೀ ಶ್ರೀ ಮಸಿಹ್ ಅನ್ಸಾರಿ ಡೆಝುಪುಲಿ ಯವರ ನೋಂದಣಿಯನ್ನು ರದ್ದುಗೊಳಿಸಿದ್ದು 5 ವರ್ಷಗಳ ಅವಧಿಯವರೆಗೆ ಅರ್ಜಿದಾರನ ಮಾರ್ಗದರ್ಶಿತ್ವವನ್ನು ರದ್ದುಗೊಳಿಸಿತು. ಅಮಾನತುಗೊಳಿಸಿದ ನಂತರ, ಕಾರಣ ಕೇಳುವ ನೋಟೀಸನ್ನು ಹೊರಡಿಸಿದ್ದು, ಇದಕ್ಕೆ ಅರ್ಜಿದಾರನನ್ನು ಕೆಲವು ದಸ್ತಾವೇಜುಗಳನ್ನು ಒದಗಿಸಲು ಕೋರಲಾಗಿತ್ತು. ವಿಶ್ವವಿದ್ಯಾನಿಲಯವು, ಮತ್ತೆ ದಿನಾಂಕ 09.01.2016 ರಂದು ನಡೆಸಿದ ತನ್ನ ಸಭೆಯಲ್ಲಿ, 5 ವರ್ಷಗಳ ಅವಧಿಗಾಗಿ ಅರ್ಜಿದಾರನ

ಮಾರ್ಗದರ್ಶಿತ್ವವನ್ನು ರದ್ದುಗೊಳಿಸಿತು. ಡಾ॥ ತಂಗಮುತ್ತುರವರ ಆಪಾದನೆಯನ್ನು ಮತ್ತು 03.02.2016 ರ ಡಾ॥ ಕಬಿಲನ್ ಮತ್ತು ಡಾ॥ ಎನ್‌ಬಿಎಲ್ ಪ್ರಸಾದ್‌ರವರ ಅಭಿಪ್ರಾಯವನ್ನು ವಿರೋಧಿಸಿ ತನ್ನ ವಿವರಣೆಯನ್ನು ಸಲ್ಲಿಸಿದರು. ಅರ್ಜಿದಾರನು ವಿವರಣೆಗಳು/ಆಕ್ಷೇಪಣೆಗಳನ್ನು ನೀಡುವ ಮೊದಲು 5 ವರ್ಷಗಳ ಅವಧಿವರೆಗೆ ಅರ್ಜಿದಾರನ ಮಾರ್ಗದರ್ಶಿತ್ವವನ್ನು ರದ್ದುಗೊಳಿಸಿ ದಿನಾಂಕ 09.01.2016 ರ ಆದೇಶವನ್ನು ಹೊರಡಿಸಲಾಯಿತು ಮತ್ತು ವಿದ್ಯಾರ್ಥಿ ಶ್ರೀ ಮಸಿಹ್ ಅನ್ಸಾರಿ ಡೆರ್ಖುಮಲಿ ರವರ ನೋಂದಣಿಯನ್ನು ರದ್ದುಗೊಳಿಸಲಾಯಿತು. ಆದುದರಿಂದ ಈ ರಿಟ್ ಅರ್ಜಿ.

4. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಟಿ.ಎಸ್. ವೆಂಕಟೇಶರವರು. ಅರ್ಜಿದಾರನ ಮಾರ್ಗದರ್ಶಿತ್ವದಲ್ಲಿ ವಿದ್ಯಾರ್ಥಿಯು ಸಲ್ಲಿಸಿದ ಮಹಾಪ್ರಬಂಧದಲ್ಲಿ ಕೃತಿಚೌರ್ಯದ ಅಂಶವಿರಲಿಲ್ಲವೆಂದು ವಾದಿಸಿದ್ದಾರೆ. ರಾಷ್ಟ್ರೀಯ ಸಂಶೋಧನಾ ಮತ್ತು ಅಭಿವೃದ್ಧಿ ನಿಗಮ, ನವದೆಹಲಿಯ ಮಾಸಿಕ ಪ್ರಕಟಣೆಯು, ಇನ್ವೆನ್‌ಷನ್ ಇಂಟೆಲಿಜೆನ್ಸ್‌ನಲ್ಲಿ 48 ನೇ ವಾರ್ಷಿಕ ಕನ್ವೆನ್‌ಷನ್ ಆಫ್ ಶುಗರ್ ಟೆಕ್ನಾಲಜಿಸ್ಟ್ ಅಸೋಷಿಯೇಷನ್ ಆಫ್ ಇಂಡಿಯಾ ಮತ್ತು 2009 ರಲ್ಲಿ. 1984ನೇ ವರ್ಷದಲ್ಲಿ ಡಾ॥ ತಂಗಮುತ್ತುರವರು ಪ್ರಕಟಿಸಿದ್ದ ಉದ್ಧೃತ ಭಾಗವನ್ನು ನಕಲು ಮಾಡಿರುವುದಕ್ಕೆ ಸಂಬಂಧಿಸಿದಂತೆ ಅವರು ಆರೋಪಿಸಿದ ದೂರು, ಡಾ॥ ತಂಗಮುತ್ತುರವರ ಕಾರ್ಯವನ್ನು ಉಲ್ಲೇಖಿಸಿದ ಉದ್ಧರಣದೊಂದಿಗೆ ಸೇರಿಸಲಾಗಿದೆ; ಮಾಹಿತಿಯುನ್ನು ಇದರಿಂದ ಪಡೆಯುಲಾಗಿದೆಯೆಂಬುದು ಸ್ಪಷ್ಟವಾಗುತ್ತದೆ.

5. ಎರಡನೆಯದಾಗಿ, ಮೈಸೂರು ವಿಶ್ವವಿದ್ಯಾನಿಲಯದ ಪಿಎಚ್‌ಡಿ ವಿನಿಮಯಗಳು, 2010ರ 8.9ನೇ ಖಂಡವು, ರಿಜಿಸ್ಟ್ರಾರ್‌ರವರು (ಮೌಲ್ಯಮಾಪನ) ಮಹಾಪ್ರಬಂಧವನ್ನು, 2010ರ ವಿನಿಮಯದ ಪ್ರಕಾರ ಪಿಎಚ್‌ಡಿ ಪದವಿ ನೀಡುವ ಸಂಬಂಧ ಅಂಗೀಕರಿಸಲಾಗಿತ್ತು ಎಂದು ತೋರಿಸುವ ವಿಶ್ವವಿದ್ಯಾನಿಲಯು ಲಾಂಛನದೊಂದಿಗೆ ಮೊಹರನ್ನು ಹಾಕತಕ್ಕದ್ದು ಮತ್ತು ಈ ಪ್ರತಿಯನ್ನು ಅಭ್ಯರ್ಥಿಗೆ

ನೀಡಿರತಕ್ಕದ್ದು ಎಂಬುದನ್ನು ಉಪಬಂಧಿಸುತ್ತದೆಯೆಂದು ವಾದಿಸಿದ್ದರು. ಅಧಿಸೂಚನೆಯನ್ನು ಹೊರಡಿಸಿದ ನಂತರ, ಮಹಾಪ್ರಬಂಧವನ್ನು ವೆಬ್‌ಸೈಟ್‌ನಲ್ಲಿ ಹಾಕಲಾಗುವುದು ಮತ್ತು ಅದನ್ನು ಯುಜಿಸಿಯು ನಿಯಮಿಸಲಾದಂಥ ಇನ್‌ಪ್ಲಿಬ್‌ನೆಟ್‌ಗೆ ಕಳುಹಿಸಲಾಗುವುದು. 8.10ನೇ ಖಂಡವು ಕೃತಿಚೌರ್ಯದ ಆರೋಪಗಳನ್ನು ಮತ್ತು ತರುವಾಯದ ಕ್ರಮಗಳನ್ನು ಕುರಿತು ಉದ್ದೇಶಿಸುತ್ತದೆ. ಈ ಖಂಡಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯವು ಸಾಕಷ್ಟು ಸಾಕ್ಷ್ಯಗಳೊಂದಿಗೆ ಕೃತಿಚೌರ್ಯದ ದೂರನ್ನು ಸ್ವೀಕರಿಸಿದ್ದರೆ ಅಥವಾ ಯಾರೇ ಪರಿಶೀಲಕನು, ಮಹಾಪ್ರಬಂಧದಲ್ಲಿ ಕೃತಿಚೌರ್ಯ ನಡೆದಿರುವುದನ್ನು ಗುರುತಿಸಿದರೆ, ಮಹಾ ಪ್ರಬಂಧವನ್ನು, ಪರಿಶೀಲಿಸಲು ಬಿಎಸ್ (ಅಧ್ಯಯನ ಮಂಡಳಿ) ಕಳುಹಿಸಿದ ತಜ್ಞರ ವಿಭಾಗದಿಂದ ಕುಲಪತಿಗಳು ಆಯ್ಕೆಮಾಡಿದ ವಿಷಯತಜ್ಞರಿಗೆ ಕಳುಹಿಸತಕ್ಕದ್ದು ಮತ್ತು ಕೃತಿಚೌರ್ಯ ಆಗಿರುವುದನ್ನು ಸ್ಪಷ್ಟಪಡಿಸತಕ್ಕದ್ದು. 8.10 ರ ಉಪ–ಖಂಡ (ಬಿ) ಕೃತಿಚೌರ್ಯವನ್ನು ರುಜುವಾತುಪಡಿಸಿದರೆ, ಆಗ, ಅಭ್ಯರ್ಥಿಗೆ ಮತ್ತು ಮಾರ್ಗದರ್ಶಕರಿಗೆ ಕಾರಣ ಕೇಳುವ ನೋಟೀಸನ್ನು ನೀಡತಕ್ಕದ್ದು ಎಂಬುದನ್ನು ಉಪಬಂಧಿಸುತ್ತದೆ. ಕಾರಣ ಕೇಳುವ ನೋಟೀಸಿಗೆ ಪ್ರತ್ಯುತ್ತರವನ್ನು ನೀಡಿದ ನಂತರ, ಅಭ್ಯರ್ಥಿಯ ನೋಂದಣಿಯನ್ನು ರದ್ದುಗೊಳಿಸುವ ಸಾಧ್ಯತೆಯನ್ನು ಮತ್ತು ಅಭ್ಯರ್ಥಿ ಹಾಗೂ ಮಾರ್ಗದರ್ಶಕರ ವಿರುದ್ಧ ಶಿಸ್ತುಕ್ರಮವನ್ನು ಪ್ರಾರಂಭಿಸುವುದನ್ನೂ ಒಳಗೊಂಡಂತೆ ಯುಕ್ತಕ್ರಮ ಕೈಗೊಳ್ಳುವ ಸಂಬಂಧ ಕಾರಣ ಕೇಳುವ ನೋಟೀಸಿಗೆ ನೀಡಿದ ಎಲ್ಲಾ ದಸ್ತಾವೇಜುಗಳು, ವರದಿಗಳು ಉತ್ತರಗಳನ್ನು ಸಿಂಡಿಕೇಟ್‌ನ ಮುಂದೆ ಇಡತಕ್ಕದ್ದು. ಅನುಬಂಧ–ಎ ನಲ್ಲಿ ಪ್ರಶ್ನಿತ ಆದೇಶವನ್ನು ಹೊರಡಿಸುತ್ತಿರುವಾಗ, ಎದುರುದಾರರು ಈ ಅಗತ್ಯ ಕಟ್ಟಾಜ್ಞೆಯನ್ನು ಪಾಲಿಸಿರಲಿಲ್ಲ.

6. ಮೂರನೆಯದಾಗಿ, ವಿಶ್ವವಿದ್ಯಾನಿಲಯದ ಕುಲಪತಿಗಳು, ಇಬ್ಬರು ವಿಷಯತಜ್ಞರಾದ ಡಾ॥ ಎಸ್. ಕಬಿಲನ್ ಮತ್ತು ಡಾ॥ ಎನ್‌ಬಿಎಲ್ ಪ್ರಸಾದ್‌ರನ್ನು ಆಯ್ಕೆಮಾಡಿದ್ದರೆಂದು ಮಾನ್ಯ ವಕೀಲರು ನಿವೇದಿಸಿದ್ದಾರೆ. ಡಾ॥ ಕಬಿಲನ್ ರವರ ವರದಿಯು, ಎರಡೂ ಕಾರ್ಯಗಳಲ್ಲಿ ಒಂದೇ ಒಂದು ವ್ಯತ್ಯಾಸವನ್ನು ಗುರುತಿಸಬಹುದೆಂದು, 'ಡಾ॥ ಪಿ. ತಂಗಮುತ್ತುರವರು ಪರಸ್ಪರ ನಿಮಿಷ ವ್ಯತ್ಯಾಸದ

ಅವದಿಯಲ್ಲಿ ಅಧ್ಯಯನ ಮಾಡಿದ್ದಾರೆ, ಆದರೆ ಡಾ॥ ಮಹಾದೇವಯ್ಯ ದಿನಗಳು ವ್ಯತ್ಯಾಸವಾದ ಅವಧಿಯಲ್ಲಿ ಅಧ್ಯಯನ ಮಾಡಿರುವುದನ್ನು ತಿಳಿಸುತ್ತದೆ. ಸಂಪೂರ್ಣ ಮಹಾಪ್ರಬಂಧವನ್ನು ಶೋಧಗಣ ಬಳಸಿ ಮೌಲ್ಯಮಾಪನ ಮಾಡಲಾಗಿದ್ದು. ಕೃತಿಚೌರ್ಯ ವಿರೋಧಿ ತಂತ್ರಾಂಶವು. ಪ್ರಸ್ತುತ ಶೇಕಡಾ 27 ರಷ್ಟು ಕೃತಿಚೌರ್ಯವನ್ನು ತಿಳಿಸುತ್ತದೆ. ಶೇಕಡಾ 30ರಷ್ಟು ಕೃತಿಚೌರ್ಯವನ್ನು ಒಪ್ಪಿಕೊಳ್ಳಬಹುದಾಗಿದೆಯೆಂಬುದನ್ನು ಕೃತಿಚೌರ್ಯ ತಂತ್ರಾಂಶ ಸ್ಪಷ್ಟಪಡಿಸಿದರೂ ಡಾ॥ ಕಬಿಲನ್‌ರವರ ವರದಿಯಲ್ಲಿ ಶೇಕಡಾ 27 ರಷ್ಟು ಕೃತಿಚೌರ್ಯವನ್ನು ಎತ್ತಿ ತೋರಿಸಿದ್ದರೂ ವಿಶ್ವವಿದ್ಯಾನಿಲಯದ ಆದೇಶ ಅಂಗೀಕರಿಸಬಹುದಾದ ಪರಿಮಿತಿಯೊಳಗಿದ್ದು ಹಾಗೆಯೇ ದಂಡನೆಯ ಕ್ರಮವನ್ನು ಖಾತರಿ ಮಾಡಿರುವುದಿಲ್ಲ. ಡಾ॥ ಎನ್‌ಬಿಎಲ್ ಪ್ರಸಾದ್ ಎರಡನೇ ವಿಷಯತಜ್ಞ, ಇವರು ಡಾ॥ ಎಸ್ ಕಬಿಲನ್ ರವರ ವರದಿಯನ್ನು ಮಾತ್ರ ಸಮರ್ಥಿಸಿದ್ದಾರೆ ಮತ್ತು ತೀರ್ಮಾನಕ್ಕೆ ಬರಲು ಪ್ರತ್ಯೇಕ ವಿಶ್ಲೇಷಣೆಯನ್ನು ಮಾಡಿರುವುದಿಲ್ಲ.

7. ತದ ನಂತರ, ಮಾನ್ಯ ವಕೀಲರು, ದಿನಾಂಕ 09.07.2014 ರ ತಮ್ಮ ಪತ್ರದ ಪ್ರಕಾರ ಡಾ॥ ತಂಗಮುತ್ತುರವರು ದೂರನ್ನು ನೀಡಿದ್ದು, ಡಾಕ್ಟರಲ್ ಸಮಿತಿಯು, ಅಭ್ಯರ್ಥಿ ಶ್ರೀ ಮಸಿನ್ ಅನ್ಸಾರಿ ಡೆಝುಪುಲಿಯು ಡಾಕ್ಟರಲ್ ಪದವಿಗೆ ಅರ್ಹನಾಗಿರುವರೆಂದು ಪ್ರಮಾಣೀಕರಿಸಿದೆ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪಿಎಚ್‌ಡಿಯ ಪದವಿ ನೀಡುವ ಸಂಬಂಧ ಮಹಾಪ್ರಬಂಧವನ್ನು ಒಪ್ಪಿಕೊಳ್ಳಲು ಶಿಫಾರಸು ಮಾಡಿದೆಯೆಂದು ನಿವೇದಿಸಿದ್ದಾರೆ. ಡಾಕ್ಟರಲ್ ಸಮಿತಿಯು ಮಾಡಿದ ಶಿಫಾರಸು, ಯಾವುದೇ ಸ್ವರೂಪದ ಯಾವುದೇ ಕೃತಿಚೌರ್ಯವನ್ನು ಎತ್ತಿಹಿಡಿದಿಲ್ಲವೆಂದು ತಿಳಿಸಿದ್ದು, ಇಲ್ಲಿಂದ ಇದನ್ನು ದಿನಾಂಕ 09.07.2014 ರ ದೂರಿನ ನಂತರ ಶಿಪಾರಸು ಮಾಡಿದೆ. ಸಾರ್ವಜನಿಕ ವಲಯಕ್ಕೆ ಬರದಿರುವ ಮಹಾಪ್ರಬಂಧ, ಕೃತಿಚೌರ್ಯವನ್ನು ಆಪಾದಿಸಿದ ದೂರನ್ನು ಸಲ್ಲಿಸಲು ಡಾ॥ ತಂಗಮುತ್ತುರವರಿಗೆ ಯಾವುದೇ ಸಂದರ್ಭ ಇರುವುದಿಲ್ಲ. ಅಲ್ಲದೆ, ಮಾನ್ಯ ವಕೀಲರು ಕೃತಿ ಸ್ವಾಮ್ಯ ಅಧಿನಿಯಮ, 1957 ರ 52ನೇ ಪ್ರಕರಣವನ್ನು ನಂಬಿಕೊಂಡಿದ್ದು. ಸಂಶೋಧನೆಗೆ ಸಂಬಂಧಿಸಿದಂತೆ ಕೃತಿಚೌರ್ಯವು ಕೆಲವು ವ್ಯಾಪ್ತಿಗೆ

ಅನುಮತೀಯವಾಗಿರುವುದಿಲ್ಲವೆಂದು ವಾದಿಸಿದ್ದಾರೆ. ಅನುಬಂಧ–ಕ್ಯೂ ನಲ್ಲಿ ಕಾರಣ ಕೇಳುವ ನೋಟೀಸನ್ನು ಹೊರಡಿಸುವ ಮೊದಲು 19.06.2015 ರಂದು ಸಿಂಡಿಕೇಟ್ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದು ಇದು ತಾರೀಖನ್ನು ನಮೂದಿಸಿಲ್ಲ, ಪತ್ರಶೀರ್ಷಿಕೆಯ ಸಾಮಾನ್ಯ ವಿಧಾನದಲ್ಲಿರುವುದಿಲ್ಲ. 31.08.2015 ರಂತೆ ದಿನಾಂಕದೊಂದಿಗೆ ರಿಜಿಸ್ಟ್ರಾರ್ (ಮೌಲ್ಯಮಾಪನ) ಸಹಿ ಹಾಕಿದ್ದಾರೆ. ಇದೇ ಶಿಫಾರಸ್ಸನ್ನು ಸಿಂಡಿಕೇಟ್ ದಿನಾಂಕ 19.01.2016 ರ ಎರಡನೇ ಅವಧಿಗೆ ಅನುಮೋದಿಸಿತ್ತು. ಸಿಂಡಿಕೇಟ್‌ನ ಸದಸ್ಯನು, ದಿನಾಂಕ 23.02.2016 ರಂದು ನಡೆದ ಸಭೆಯಲ್ಲಿ ಪ್ರಕ್ರಿಯೆಗಳನ್ನು ಪಾಲಿಸಿಲ್ಲವೆಂಬ ಅಂಶವನ್ನು ಎತ್ತಲಾಗಿದ್ದು, ಎದುರುದಾರರು, ವಿಷಯವು ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವುದೆಂಬ ಕಾರಣಕ್ಕೆ ಇದನ್ನು ನಿರಾಕರಿಸಿದ್ದಾರೆ. ವಾಸ್ತವವಾಗಿ, ಈ ರಿಟ್ ಅರ್ಜಿಯನ್ನು 18.04.2016 ರಂದು ಅರ್ಜಿದಾರನು ಸಲ್ಲಿಸಿದ್ದಾನೆ. 03.02.2016 ರಂದು ಅರ್ಜಿದಾರನು ಸಲ್ಲಿಸಿದ ವಿವರಣೆ / ಆಕ್ಷೇಪಣೆಗಳನ್ನು ಪ್ರಶ್ನಿತ ಆದೇಶವನ್ನು ಹೊರಡಿಸುವ ಮೊದಲು ಪರಿಗಣಿಸದಿದ್ದು, ಅದು ಸ್ವಾಭಾವಿಕ ನ್ಯಾಯದ ತತ್ವಗಳ ಉಲ್ಲಂಘನೆಗೆ ಕಾರಣವಾಗುತ್ತದೆ. ಹೀಗಾಗಿ ಮಾನ್ಯ ವಕೀಲರು, ಈ ರಿಟ್ ಅರ್ಜಿಯನ್ನು ಪುರಸ್ಕರಿಸಿ ಇಲ್ಲಿನ ಪ್ರಶ್ನಿತ ಆದೇಶಗಳನ್ನು ತಳ್ಳಿಹಾಕಲು ಕೋರಿದ್ದಾರೆ.

8. ಮತ್ತೊಂದು ಕಡೆ, ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಟಿ.ಪಿ. ರಾಜೇಂದ್ರಕುಮಾರ್ ಸುಂಗೆಯವರು, ವಿಶ್ವವಿದ್ಯಾನಿಲಯವು, ಶ್ರೀ ಮಸಿಹ್ ಅನ್ಸಾರಿ ಡೆಝುಪುಲಿಯವರು ಸಂಶೋಧನಾ ಲೇಖನವು 1984– ನೇ ವರ್ಷದಲ್ಲಿ ಶ್ರೀ ತಂಗಮುತ್ತು ಮಾಡಿದ ಅದೇ ಸಂಶೋಧನೆಯನ್ನು ತಂದಿದ್ದಾರೆ ಎಂದು ದೂರಿದ್ದು, 09.09.2014 ರಂದು ಲಿಖಿತ ಪತ್ರ ಬರೆದಿರುವ ಡಾ॥ ತಂಗಮುತ್ತು ಕಾರ್ಯದರ್ಶಿ, ದಿ ಸೌತ್ ಇಂಡಿಯನ್ ಶುಗರ್‌ಕೇನ್ ಮತ್ತು ಶುಗರ್ ಟೆಕ್ನಾಲಜೀಸ್' ಅಸೋಶಿಯೇಷನ್, ಚೆನ್ನೈ ಇವರಿಂದ ದೂರನ್ನು ಸ್ವೀಕರಿಸಿದೆಯೆಂದು ವಾದಿಸಿರುವರು. ಸದರಿ ದೂರನ್ನು ಸ್ವೀಕರಿಸಿರುವುದಕ್ಕೆ ಅನುಸಾರವಾಗಿ, ಎದುರುದಾರರು, ಮತ್ತೊಬ್ಬ ವಿಷಯ ತಜ್ಞರಿಂದ ಇನ್ನೊಂದು ಅಭಿಪ್ರಾಯವನ್ನು ಕೋರಲು ಸೂಚಿಸಿರುವ ವಿಶ್ವವಿದ್ಯಾನಿಲಯದ ಕುಲಪತಿಗಳ ಆದೇಶಗಳ ಮೇರೆಗೆ ಡಾ॥ ಕಬಿಲನ್ ಹೆಸರಿನ

ವಿಷಯ ತಜ್ಞರ ಅಭಿಪ್ರಾಯವನ್ನು ಕೋರಿದ್ದಾರೆ, ಹಾಗೆಯೇ, ಮತ್ತೊಬ್ಬ ವಿಷಯ ತಜ್ಞ ಎಂದರೆ ಡಾ॥ ಎನ್‌ಬಿಎಲ್ ಪ್ರಸಾದ್ ಆಂಧ್ರಪ್ರದೇಶ ಇವರ ಅಭಿಪ್ರಾಯವನ್ನು ಪಡೆದುಕೊಂಡಿದ್ದು, ಇವರು, ಡಾ॥ ಕಬಿಲನ್‌ರವರ ಅಭಿಪ್ರಾಯವನ್ನು ಸಮ್ಮತಿಸಿದ್ದಾರೆ. ವಿಷಯ ತಜ್ಞರುಗಳಿಂದ ಸ್ವೀಕರಿಸಲಾದ ಅಭಿಪ್ರಾಯವನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನ ಮುಂದೆ ಇಡಲಾಗಿದ್ದು, ಅದು, ಸವಿವರವಾದ ಚರ್ಚೆಯನ್ನು ನಡೆಸಿದ ನಂತರ 5 ವರ್ಷಗಳ ಅವಧಿಗೆ ಅರ್ಜಿದಾರನ ಮಾರ್ಗದರ್ಶಿತ್ವವನ್ನು ರದ್ದುಗೊಳಿಸಲು ನಿರ್ಣಯಿಸಿದೆ. ಕಾರಣ ಕೇಳುವ ನೋಟಿಸಿಗೆ ವಿವರಣೆಯನ್ನು ಸಲ್ಲಿಸುವಲ್ಲಿ ಅರ್ಜಿದಾರನ ಕಡೆಯಿಂದ ಅತಿಯಾದ ವಿಳಂಬವಾಗಿತ್ತು ಮತ್ತು ಅನುಬಂಧ-ಎ ನಲ್ಲಿ ಪ್ರಶ್ನಿತ ಆದೇಶವನ್ನು ಹೊರಡಿಸಿದ ನಂತರ ಮಾತ್ರ ಅರ್ಜಿದಾರನು ಸದರಿ ಪ್ರತ್ಯುತ್ತರವನ್ನು ನೀಡಿದ್ದನು. ಮತ್ತೆ, ಮಾನ್ಯ ವಕೀಲರು, ಪಿಎಚ್‌ಡಿಯನ್ನು ರೂಪಿಸುವುದಕ್ಕೆ ಸಂಬಂಧಿಸಿದ ವಿನಿಮಯಗಳು, ಸಿಂಡಿಕೇಟ್ ಕೃತಿಚೌರ್ಯದ ವಿಷಯದಲ್ಲಿ ಯುಕ್ತ ಕ್ರಮಕೈಗೊಳ್ಳತಕ್ಕದ್ದೆಂದು ಉಪಬಂಧಿಸುತ್ತದೆಯೆಂದು ಮತ್ತು ಅವನ ಮಾರ್ಗದರ್ಶಿತ್ವದಲ್ಲಿ ಅರ್ಜಿದಾರನ ವಿದ್ಯಾರ್ಥಿಯು ಮಾಡಿದ ಕೃತಿಚೌರ್ಯವನ್ನು ಸಿಂಡಿಕೇಟು ಸಂಪೂರ್ಣವಾಗಿ ಮನಗಂಡಿರುವುದರಿಂದ, ಪ್ರಶ್ನಿತ ಆದೇಶವನ್ನು ಹೊರಡಿಸುವಲ್ಲಿ ಸಿಂಡಿಕೇಟ್ ತೆಗೆದುಕೊಂಡ ಕ್ರಮವು ಕಾನೂನಿಗನುಸಾರವಾಗಿದ್ದು, ಈ ನ್ಯಾಯಾಲಯ ಹಸ್ತಕ್ಷೇಪ ಮಾಡುವ ಅಗತ್ಯವಿರುವುದಿಲ್ಲವೆಂದು ನಿವೇದಿಸಿದ್ದಾರೆ.

9. ಕೃತಿಚೌರ್ಯವು, ಶಿಕ್ಷಣದಲ್ಲಿ ಗಂಭೀರ ಅಪರಾಧವಾದುದಾಗಿದೆಯೆಂದು ಮತ್ತು ಇದನ್ನು ಮುಂದುವರಿಸಲು ಅನುಮತಿಸಲಾಗುವುದು ಎಂದು ನಿವೇದಿಸಿದ್ದಾರೆ. ಕ್ಷೇತ್ರದಲ್ಲಿನ ಶೈಕ್ಷಣಿಕ ತಜ್ಞರು ಒಮ್ಮೆ ನಿರ್ಧರಿಸಿ, ಕೃತಿಚೌರ್ಯದ ಬಗ್ಗೆ ವರದಿ ಮಾಡಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗಳು ನಿರ್ಣಯವನ್ನು ತೆಗೆದುಕೊಂಡರೆ, ನ್ಯಾಯಾಲಯಗಳು, ಸಂಶೋಧನೆಯ ಹಿತಾಸಕ್ತಿಯಿಂದಾಗಿ ಇದರ ಮಧ್ಯೆ ಪ್ರವೇಶಿಸುವ ಸಾಧ್ಯತೆಯಿರುವುದಿಲ್ಲ. ಎದುರುದಾರರು ತೆಗೆದುಕೊಂಡ ಕ್ರಮವು ಮಾರ್ಗಸೂಚಿಗಳ ಮೇರೆಗೆ ನಿಯಮಿಸಲಾದ ಪ್ರಕ್ರಿಯೆಗೆ ಅನುರೂಪವಾಗಿರುತ್ತವೆ. ಕೆಲವು ಸನ್ನಿವೇಶಗಳ್ಲಲಿ, ಪ್ರಶ್ನಿತ ಆದೇಶಗಳು ಭಾರತ ಸಂವಿಧಾನದ 226 ಮತ್ತು 227 ನೇ ಅನುಚ್ಛೇಧಗಳ

ಮೇರೆಗೆ ಹಸ್ತಕ್ಷೇಪ ಮಾಡುವುದನ್ನು ಅಪೇಕ್ಷಿಸುವುದಿಲ್ಲ. ತದನುಸಾರವಾಗಿ, ಅವನು ರಿಟ್ ಅರ್ಜಿಯನ್ನು ವಜಾಗೊಳಿಸಲು ಕೋರಿದ್ದಾನೆ.

10. ಪಕ್ಷಕಾರ ಪರವಾಗಿ ಹಾಜರಾದ ಮಾನ್ಯ ವಕೀಲರ ವಾದವನ್ನು ಆಲಿಸಲಾಗಿದೆ ಮತ್ತು ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಅವಲೋಕಿಸಲಾಗಿದೆ.

11. ಈ ಅರ್ಜಿಯಲ್ಲಿ ಪರಿಗಣನೆಗಾಗಿ ಈ ಅಂಶಗಳು ಉದ್ಭವವಾಗಿವೆ:

1. ಅನುಬಂಧ–ಎ ನಲ್ಲಿರುವ ಪ್ರಶ್ನಿತ ಆದೇಶವನ್ನು ಹೊರಡಿಸುವಾಗ ಮೈಸೂರು ವಿಶ್ವವಿದ್ಯಾನಿಲಯದ 2010 ರ ಪಿಎಚ್‌ಡಿ ವಿನಿಮಯಗಳಲ್ಲಿ ನಿಯಮಿಸಲಾದ ಪ್ರಕ್ರಿಯೆಯನ್ನು ವಿಶ್ವವಿದ್ಯಾನಿಲಯವು ಪಾಲಿಸಿದೆಯೇ ಮತ್ತು ಕಾನೂನಿನಲ್ಲಿ ಸಮರ್ಥನೀಯವಾಗಿದೆಯೇ?

2. ಅರ್ಜಿದಾರನ ಮಾರ್ಗದರ್ಶಿತ್ವವನ್ನು 5 ವರ್ಷಗಳವರೆಗೆ ಅಮಾನತುಗೊಳಿಸುವ ದಂಡನಾ ಕ್ರಮವನ್ನು ಕೈಗೊಳ್ಳಲು ಅರ್ಜಿದಾರನ ವಿರುದ್ಧ ಆಪಾದಿಸಲಾದ ಕೃತಿಚೌರ್ಯವನ್ನು ದೃಢಪಡಿಸಲಾಗಿದೆಯೇ?

12. ಎರಡೂ ಅಂಶಗಳಿಗೆ ಸಂಬಂಧ ಕಲ್ಪಿಸಲಾಗಿದೆ, ಆದುದರಿಂದ ಈ ಕೆಳಗಿನಂತೆ ಸಾಮಾನ್ಯವಾಗಿ ಉತ್ತರಿಸಲಾಗಿದೆ:

ಹಿಂದೆ ಹೇಳಲಾದ ಸಂಗತಿಗಳ ಹಿನ್ನೆಲೆಯಲ್ಲಿ, ಕೃತಿಚೌರ್ಯ ಎಂದರೇನು ಎಂಬುದನ್ನು ನೋಡಬೇಕಾಗಿದೆ. ಪಿ. ರಾಮನಾಥ ಅಯ್ಯರ್‌ರವರು ದಿ ಲಾ ಲೆಕ್ಸಿಕನ್ ಕಾನೂನು ನಿಘಂಟಿನಲ್ಲಿ, 'ಕೃತಿಚೌರ್ಯ' ವನ್ನು ಎರವಲು ತೆಗೆದುಕೊಂಡ

ವಿಚಾರಗಳನ್ನು ಮೂಲವಾಗಿ ಪ್ರಕಟಿಸುವುದು; ಮತ್ತೊಬ್ಬ ಲೇಖಕನ ಕಾರ್ಯದಿಂದ ಸಾಹಿತ್ಯಾತ್ಮಕ ವಿಷಯವನ್ನು ಕದಿಯುವುದು' ಎಂದು ವಿವರಿಸಿದ್ದಾರೆ".

13. ಈ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ವರದಿಯಾದ ***ಡಾ॥ ಎಂ. ವೆಂಕಟರಮಣಪ್ಪ –ವಿರುದ್ಧ– ಛಾನ್ಸಲರ್, ಬೆಂಗಳೂರು ವಿಶ್ವವಿದ್ಯಾನಿಲಯ, ರಾಜಭವನ ಬೆಂಗಳೂರು–1 ಮತ್ತು ಇತರರು*** [1] ಪ್ರಕರಣದಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> *"17. ಸರ್ವೋಚ್ಚ ನ್ಯಾಯಾಲಯ ಮತ್ತು ತೀರ್ಪುಗಳ ಸರಣಿಯಲ್ಲಿ ಈ ನ್ಯಾಯಾಲಯವು ವಿಧಿಸಿದ ಕಾನೂನಿನ ಸುಸ್ಥಾಪಿತ ತತ್ವಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆಪಾದಿತ ಕೃತಿಚೌರ್ಯವಾಗಿದೆಯೇ ಇಲ್ಲವೇ ಎಂಬ ಪ್ರಶ್ನೆಗೆ ಸಂಬಂಧಿಸಿದ ಸವಿವರವಾದ ಪರಿಗಣನೆಯನ್ನು ಈ ವಿಷಯ ಅಗತ್ಯಪಡಿಸುತ್ತದೆಯೆಂದು ಭಾವಿಸುತ್ತೇನೆ. ಸದರಿ ಪ್ರಶ್ನೆಯು ಸಂಗತಿಯನ್ನು ಹುಡುಕುವುದಾಗಿದೆ ಮತ್ತು ಅದರೊಳಗೆ ಹೋಗಬಲ್ಲದು ಮತ್ತು ವಿಚಾರಣೆಯನ್ನು ನಡೆಸುವ ಮೂಲಕ ಮಾತ್ರ ಉತ್ತರಿಸಬಲ್ಲದು. 'ಕೃತಿಚೌರ್ಯ' ಪದದ ನಿಘಂಟಿನ ಅರ್ಥ 'ಪರಿಕಲ್ಪನೆಗಳನ್ನು, ಮೂಲ ಪಾಠದ ಭಾಗವನ್ನು, ಬೇರೊಬ್ಬರ ಕಾರ್ಯದಿಂದ ನಕಲು ಮಾಡುವುದು ಮತ್ತು ಒಬ್ಬರಿಗೆ ಸ್ವಂತದ್ದಾಗಿರುವುದನ್ನು ಹಾಗೆಯೇ ಬಳಸುವುದು".*

14. ***ಶ್ರೀ ಪಿ.ಎಂ. ಪರಮೇಶ್ವರಮೂರ್ತಿ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು*** [2] ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ಹೀಗೆ ಅಭಿಪ್ರಾಯಪಟ್ಟಿದೆ:

1. ಐಎಲ್‌ಆರ್ 2007 ಕೆಎಆರ್ 112    2. ಐಎಲ್‌ಆರ್ 2013 ಕೆಎಆರ್ 209

*"57. 18ನೇ ಶತಮಾನದಲ್ಲಿ ಅದರಲ್ಲೂ ನಿರ್ದಿಷ್ಟವಾಗಿ ರೊಮ್ಯಾಂಟಿಕ್ ಕಾಲದಲ್ಲಿ ಯೂರೋಪಿನಲ್ಲಿ ಮಾತ್ರ ಕೃತಿಚೌರ್ಯದ ಹೊಸ ಪರಿಕಲ್ಪನೆ ಅನೈತಿಕವಾಗಿ ಮತ್ತು ಸೋಪಜ್ಞತೆಯು ಆದರ್ಶಪ್ರಾಯವಾಗಿ, ಹೊರಹೊಮ್ಮಿತು. 18ನೇ ಶತಮಾನದಿಂದೀಚೆಗೆ ಹೊಸ ನೀತಿಗಳನ್ನು ಸ್ಥಾಪಿಸಲಾಯಿತು. ಹಾಗೂ ಶಿಕ್ಷಣ ಮತ್ತು ಪತ್ರಿಕೋದ್ಯಮ ವಲಯಗಳಲ್ಲಿ ಪ್ರಧಾನವಾಗಿ ಜಾರಿಗೆ ತರಲಾಯಿತು. ಇಲ್ಲಿ, ಕೃತಿಚೌರ್ಯವನ್ನು ಈಗ ಶೈಕ್ಷಣಿಕ ವಂಚನೆಯೆಂದು ಪತ್ರಿಕೋದ್ಯಮದ ನೀತಿಯನ್ನು ಉಲ್ಲಂಘಿಸುವುದೆಂದು ಪರಿಗಣಿಸಲಾಗಿದೆ. ಕೃತಿಚೌರ್ಯವೆಂಬುದು ಅಪರಾಧವಲ್ಲ ಆದರೆ, ಅದರಿಂದಾಗಿಯೇ ಇದನ್ನು ನೈತಿಕ ಅಪರಾಧದ ಆಧಾರಗಳ ಮೇಲೆ ಹೆಚ್ಚು ಸಮ್ಮತವಾಗಿಲ್ಲ. ಶೈಕ್ಷಣಿಕ ಕ್ಷೇತ್ರದೊಳಗೆ, ವಿದ್ಯಾರ್ಥಿಗಳು ಪ್ರೊಫೆಸರುಗಳ ಅಥವಾ ಸಂಶೋಧಕರ ಕೃತಿಚೌರ್ಯವನ್ನು ಶೈಕ್ಷಣಿಕ ವಂಚನೆ ಅಥವಾ ಶೈಕ್ಷಣಿಕ ಮೋಸ ಎಂದು ಪರಿಗಣಿಸಲಾಗಿದ್ದು. ಇಲ್ಲಿಯವರೆಗೆ ಹಾಗೂ ಹೊರದೂಡುವಿಕೆಯುನ್ನು ಒಳಗೊಂಡಂತೆ ಶೈಕ್ಷಣಿಕ ದೂಷಣೆಗೊಳಪಡುತ್ತದೆ. ಪ್ರೊಫೆಸರುಗಳು ಮತ್ತು ಸಂಶೋಧಕರುಗಳ ಸಂಬಂಧದಲ್ಲಿ ಕೃತಿಚೌರ್ಯವನ್ನು ನಂಬಿಕೆಯ ನಷ್ಟ ಮತ್ತು ಸಮಗ್ರತೆ ಕಂಡು ಬರುವುದರಲ್ಲಿ ಆದ ನಷ್ಟದೊಂದಿಗೆ, ತೆಗೆದು ಹಾಕಲು ಅಮಾನತಿನಲ್ಲಿಡುವ ಸಾಲಿನಿಂದ ಊರ್ಜಿತಗೊಳಿಸಿ ದಂಡಿಸಲಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಪಂಚ ಕೃತಿಚೌರ್ಯವು ತುಂಬಾ ಗಂಭೀರವಾದ ಅಪರಾಧವಾಗಿದ್ದು, ಇದರ ಕಾರಣದಿಂದ ದಂಡನೆಗಳನ್ನು ಹಾಗೆಯೇ ನಿರ್ದಿಷ್ಟ ಕೆಲಸವನ್ನಾಧರಿಸಿದ ಅಥವಾ ಅಂಥ ಕ್ರಮಕ್ಕಾಗಿ ದರ್ಜೆಯಲ್ಲಿ ವಿಫಲವಾಗಿರುವುದು. ಪುನರಾವರ್ತಿತ ಕೃತಿಚೌರ್ಯದ ಸಂದರ್ಭಗಳಲ್ಲಿ ಅಥವಾ ಆ ಪ್ರಕರಣಗಳಲ್ಲಿ*

*ವಿದ್ಯಾರ್ಥಿಯು ತೀವ್ರತರವಾದ ಕೃತಿಚೌರ್ಯವನ್ನು ಮಾಡಿರುವಲ್ಲಿ (ಉದಾಹರಣೆಗೆ ಮೂಲ ಕಾರ್ಯವೆಂದು ಬರವಣಿಗೆಯ ನಕಲು ಭಾಗವನ್ನು ಸಲ್ಲಿಸುವುದು) ವಿದ್ಯಾರ್ಥಿಯುನ್ನು ಅಮಾನತುಗೊಳಿಸಬಹುದು ಅಥವಾ ಹೊರಹಾಕಬಹುದು. ಹಲವಾರು ವಿಶ್ವವಿದ್ಯಾನಿಲಯುಗಳಲ್ಲಿ ಕೃತಿಚೌರ್ಯದ ದಂಡನೆಯಾಗಿ ಶೈಕ್ಷಣಿಕ ಪದವಿ ಅಥವಾ ಪ್ರಶಸ್ತಿಗಳನ್ನು ರದ್ದುಗೊಳಿಸಬಹುದು. ಆದುದರಿಂದ, ಕೃತಿಚೌರ್ಯವು ಸರಳ ಅರ್ಥದಲ್ಲಿ ಬೇರೊಬ್ಬರ ಸೃಜನಶೀಲತೆ, ಪರಿಕಲ್ಪನೆಗಳು, ಭಾಷೆಯನ್ನು ಕದಿಯುವುದಾಗಿದೆ ಮತ್ತು ಮೋಸಗೊಳಸುವ ಪರಿಯಾಗಿದೆ. ಶೈಕ್ಷಣಿಕ ವಲಯದಲ್ಲಿ ಇದನ್ನು ಶೈಕ್ಷಣಿಕ ವಂಚನೆ ಮತ್ತು ಶೈಕ್ಷಣಿಕ ಮೋಸವೆಂದು ಪರಿಗಣಿಸಲಾಗಿದೆ. ನೈತಿಕವಾಗಿ ಮತ್ತು ನೀತಿನಿಯಮಿತವಾಗಿ ಒಪ್ಪಿಕೊಳ್ಳಲಾಗುವುದಿಲ್ಲ. ಇದು ಸನ್ನಡತೆಯ ಕೊರತೆಯನ್ನು ತಿಳಿಸುತ್ತದೆ".*

15. ಅರ್ಜಿದಾರನ ಮಾರ್ಗದರ್ಶಿತ್ವದಲ್ಲಿ ವಿದ್ಯಾರ್ಥಿಯು ಸಲ್ಲಿಸಿದ ಮಹಾ ಪ್ರಬಂಧದಲ್ಲಿ ಕೃತಿಚೌರ್ಯವಿದೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆಯು ಸಂಗತಿಯ ನಿರ್ಣಯವಾಗಿದ್ದು, ಇದು ವಿಷಯ ಕ್ಷೇತ್ರ ತಜ್ಞರು ಮಾಡಬೇಕು ಮತ್ತು ಇದನ್ನು ಭಾರತ ಸಂವಿಧಾನದ 226 ಮತ್ತು 227 ನೇ ಅನುಚ್ಛೇಧಗಳ ಮೇರೆಗೆ ಆಲೋಚಿಸಲಾದ ವಿಶೇಷ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವ ಮೂಲಕ ನಿರ್ಧರಿಸಲಾಗುವುದಿಲ್ಲವೆಂದು ಸರ್ವೇಸಾಮಾನ್ಯವಾದುದು. ಅರ್ಜಿದಾರನ ಮಾರ್ಗದರ್ಶಿತ್ವವನ್ನು ಅಮಾನತುಗೊಳಿಸುವ ದಂಡನಾ ಕ್ರಮವನ್ನು ಪ್ರಾರಂಭಿಸುವಾಗ ಎದುರುದಾರರು ಯುಕ್ತ ಪ್ರಕ್ರಿಯೆಯನ್ನು ಅನುಸರಿಸಿದ್ದಾರೆಯೇ ಎಂಬುದನ್ನು ಪರೀಕ್ಷಿಸಲು ಈಗ ಏನು ಮಾಡಬೇಕಾಗುತ್ತದೆ.

16. ನ್ಯಾಯಿಕ ಪರಾಮರ್ಶೆಯು ನಿರ್ಣಾಯಕವಲ್ಲ, ಆದರೆ ನಿರ್ಣಯ ಮಾಡುವ ಪ್ರಕ್ರಿಯೆಯಾಗಿದೆ. ಅಂಥ ನಿರ್ಣಯ ಮಾಡುವ ಪ್ರಕ್ರಿಯೆಗೆ ನ್ಯಾಯಾಲಯ

ಸಂಬಂಧಪಡುತ್ತದೆ. ಅಂಥ ಪ್ರಕ್ರಿಯೆಯು ಸ್ವೇಚ್ಛೆಯಾದುದಾಗಿದೆಯೆಂದು ಕಂಡುಬಂದರೆ, ನಿರ್ಣಯವನ್ನು ತಳ್ಳಿಹಾಕಬೇಕಾಗುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ ಪಿಎಚ್‌ಡಿ ವಿನಿಮಯ 2010ರ 8ನೇ ಖಂಡವು ಹೀಗೆ ಮುಂದುವರಿಯುತ್ತದೆ:

> *"8.10. ಕೃತಿಚೌರ್ಯ ಆರೋಪಗಳು ಮತ್ತು ತರುವಾಯದ ಕ್ರಮಗಳು:*
>
> *(ಎ) ವಿಶ್ವವಿದ್ಯಾನಿಲಯವು ಸಾಕಷ್ಟು ಸಾಕ್ಷ್ಯಗಳೊಂದಿಗೆ ಕೃತಿಚೌರ್ಯದ ದೂರನ್ನು ಸ್ವೀಕರಿಸಿದರೆ ಅಥವಾ ಯಾವುದೇ ಪರಿಶೀಲಕನು ಮಹಾಪ್ರಬಂಧದಲ್ಲಿ ಕೃತಿಚೌರ್ಯವಾಗಿದೆಯೆಂದು ತೋರಿಸಿದರೆ, ಮಹಾಪ್ರಬಂಧವನ್ನು, ಪರಿಶೀಲಿಸಲು ಬಿಓಎಸ್‌ರವರು ಕಳುಹಿಸಿದ ತಜ್ಞರ ವಿಭಾಗದಿಂದ ಕುಲಪತಿಗಳೂ ಆಯ್ಕೆಮಾಡಿದ ವಿಷಯುತಜ್ಞರಿಗೆ ಕಳುಹಿಸತಕ್ಕದ್ದು ಮತ್ತು ಕೃತಿಚೌರ್ಯ ಆಗಿರುವುದನ್ನು ಸ್ಪಷ್ಟಪಡಿಸತಕ್ಕದ್ದು.*
>
> *(ಬಿ) ಕೃತಿಚೌರ್ಯವು ರುಜುವಾತಾದರೆ, ಆಗ ಕಾರಣ ಕೇಳುವ ನೋಟೀಸನ್ನು ನೀಡತಕ್ಕದ್ದು ಮತ್ತು ಕಾರಣ ಕೇಳುವ ನೋಟೀಸಿಗೆ ಅಭ್ಯರ್ಥಿಗೆ ಮತ್ತು ಮಾರ್ಗದರ್ಶಿಕನಿಗೆ ನೀಡತಕ್ಕದ್ದು ಮತ್ತು ಕಾರಣ ಕೇಳುವ ನೋಟೀಸಿಗೆ ಉತ್ತರವನ್ನು ನೀಡಿದ ನಂತರ, ಕಾರಣ ಕೇಳುವ ನೋಟಿಸಿಗೆ ಎಲ್ಲಾ ದಸ್ತಾವೇಜುಗಳೂ/ವರದಿಗಳು/ಉತ್ತರಗಳನ್ನು, ಅಭ್ಯರ್ಥಿಯ ನೋಂದಣಿಯನ್ನು ರದ್ದುಮಾಡುವ ಸಾಧ್ಯತೆಯನ್ನು ಮತ್ತು ಅಭ್ಯರ್ಥಿ ಮತ್ತು ಮಾರ್ಗದರ್ಶಕನ ವಿರುದ್ಧ ಶಿಸ್ತುಕ್ರಮವನ್ನು*

*ಪ್ರಾರಂಭಿಸುವುದನ್ನು ಒಳಗೊಂಡಂತೆ ಯುಕ್ತ ಕ್ರಮದ ಸಂಬಂಧ ಸಿಂಡಿಕೇಟ್‌ನ ಮುಂದೆ ಇಡತಕ್ಕದ್ದು.*

17. ಈ 8.10ನೇ ಖಂಡಕ್ಕೆ ಸಂಬಂಧಿಸಿದಂತೆ ತಜ್ಞರುಗಳ ವಿಭಾಗದಿಂದ ಕುಲಪತಿಗಳು ಆಯ್ಕೆಮಾಡಿದ ವಿಷಯ ತಜ್ಞರ ಅಭಿಪ್ರಾಯವನ್ನು ಪಡೆದುಕೊಳ್ಳಬೇಕೆಂಬುದು ಆದೇಶವಾಗಿದೆ. ರುಜುವಾತಾದರೆ, ಆಗ ಕಾರಣ ಕೇಳುವ ನೋಟೀಸನ್ನು ಅಭ್ಯರ್ಥಿಗೆ ಮತ್ತು ಮಾರ್ಗದರ್ಶಕನಿಗೆ ನೀಡತಕ್ಕದ್ದು. ಕಾರಣ ಕೇಳುವ ನೋಟೀಸನ್ನು ಹೊರಡಿಸಿದ ನಂತರ ಮಾತ್ರ ವಿಷಯವನ್ನು ಯುಕ್ತ ಕ್ರಮಕ್ಕಾಗಿ ಸಿಂಡಿಕೇಟ್‌ನ ಮುಂದೆ ಇಡಬೇಕಾಗುತ್ತದೆ. ಮೊದಲನೆಯದಾಗಿ, ವಿಷಯವನ್ನು, ಕಾರಣ ಕೇಳುವ ನೋಟೀಸನ್ನು ಹೊರಡಿಸುವ ಮೊದಲು 19.06.2015 ರಂದು ಸಿಂಡಿಕೇಟ್‌ನ ಮುಂದೆ ಇಟ್ಟಿದ್ದರು. ಕಾರಣ ಕೇಳುವ ನೋಟೀಸು ವಿಶ್ವವಿದ್ಯಾನಿಲಯದ ಪತ್ರ ಶಿರೋನಾಮೆಯಲ್ಲಿರಲಿಲ್ಲ. ಇದು ಸಾಮಾನ್ಯ ಬಿಳಿ ಹಾಳೆಯಲ್ಲಿದ್ದು ಇದು ಅರ್ಜಿದಾರನನ್ನು ಉದ್ದೇಶಿಸಿದಂತೆ ವಿಶ್ವವಿದ್ಯಾನಿಲಯವು ಕಾರಣ ಕೇಳುವ ನೋಟೀಸನ್ನು ಹೊರಡಿಸುವ ಸಾಮಾನ್ಯವಾಗಿ ರೂಢಿಯಲ್ಲಿಲ್ಲದ ವಾಡಿಕೆಯಾಗಿದೆ. ಸಾಮಾಜಿಕ ನ್ಯಾಯವು ಮೂಲಭೂತ ತತ್ವವಾಗಿದ್ದು, ಇದನ್ನು ಯಾವುದೇ ದಂಡನಾ ಕ್ರಮವನ್ನು ಪ್ರಾರಂಭಿಸುವ ಮೊದಲು ಅನುಸರಿಸಬೇಕಾಗುತ್ತದೆ. 31.08.2015 ರಂದು ಹೊರಡಿಸಿದ ಕಾರಣ ಕೇಳುವ ನೋಟೀಸಿಗೆ ತನ್ನ ವಿವರಣೆಯನ್ನು ನೀಡಲು ಅರ್ಜಿದಾರನಿಗೆ ಸಾಕಷ್ಟು ಯುಕ್ತ ಅವಕಾಶವನ್ನು ನೀಡದೆ, ವಿಷಯವನ್ನು 19.01.2016 ರಂದು ಎರಡನೇ ಬಾರಿಗೆ ಸಿಂಡಿಕೇಟ್‌ನ ಮುಂದೆ ಇಡಲಾಗಿದ್ದು, ಇದರಲ್ಲಿ 19.06.2015 ರ ಮೊದಲಿನ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವನ್ನು ಪುನರುಚ್ಚರಿಸಲಾಗಿತ್ತು.

18. ನಿರ್ವಿವಾದವಾಗಿ, ಅರ್ಜಿದಾರನು 03.02.2016 ರಂದು ಕಾರಣ ಕೇಳುವ ನೋಟೀಸಿಗೆ ವಿವರಣೆಯನ್ನು / ಆಕ್ಷೇಪಣೆಯನ್ನು ಸಲ್ಲಿಸಿದ್ದಾನೆ. ವಿಶ್ವವಿದ್ಯಾನಿಲಯವು,

ಅರ್ಜಿದಾರನ ವಾದಗಳನ್ನು ಪರಿಶೀಲಿಸಲು ಯಾವುದೋ ಸಂದರ್ಭವನ್ನು ಹೊಂದಿರಲಿಲ್ಲ. ಹಾಗೆಯೇ, ಅವನ ಪ್ರಕರಣಕ್ಕೆ ಕಾರಣವನ್ನು ತೋರಿಸಲು ಅರ್ಜಿದಾರನಿಗೆ ಯುಕ್ತ ಅವಕಾಶವನ್ನು ನೀಡದೆ ಅನುಬಂಧ–ಎ ರಲ್ಲಿ ಹೊರಡಿಸಿದ ಆದೇಶವು ಕಾನೂನುಬಾಹಿರವಾಗಿದೆ ಮತ್ತು ಅದನ್ನು ಈ ಅಂಶವೊಂದರಿಂದಲೇ ತಳ್ಳಿ ಹಾಕಬೇಕಾಗುತ್ತದೆ. ದಿನಾಂಕ 09.09.2014 ರ ಡಾಕ್ಟರಲ್ ಕಮಿಟಿ ಶಿಫಾರಸು, ದಿನಾಂಕ 09.07.2014 ರ ಡಾ|| ತಂಗಮುತ್ತು ರವರ ದೂರಿಗೆ ತರುವಾಯದ್ದಾಗಿತ್ತು. ಅರ್ಜಿದಾರನ ಮತ್ತು ವಿದ್ಯಾರ್ಥಿಯ ವಿರುದ್ಧ ಕೃತಿಚೌರ್ಯ ಅಥವಾ ದೂರನ್ನು ಕುರಿತಂತೆ ಯಾವುದೇ ವದಂತಿಯಿರುವುದಿಲ್ಲ. ವಿಷಯ ತಜ್ಞ ಡಾ|| ಕಬಿಲನ್ ರವರ ವರದಿಯು, ಇದು ಸಂಶೋಧನಾ ಕಾರ್ಯದ ಅಧ್ಯಾಯ–Vರಲ್ಲಿ ಮಾತ್ರ ಡಾ|| ತಂಗಮುತ್ತುರವರ ಕಾರ್ಯವನ್ನು ನಕಲು ಮಾಡಲಾಗಿದೆಯೆನ್ನುವ ಅವರ ಆಕ್ಷೇಪಣೆಗಳ ಹೇಳಿಕೆಗಳಲ್ಲಿ ಎದುರುದಾರರು ಒಪ್ಪಿಕೊಳ್ಳಲಾದಂತೆ ಶೇಕಡಾ 27 ರಷ್ಟು ಕೃತಿಚೌರ್ಯವನ್ನು ಸೂಚಿಸುತ್ತದೆ. ಶೇಕಡಾ 30 ರಷ್ಟರ ಮಟ್ಟಿಗೆ ಕೃತಿಚೌರ್ಯದ ಅಂಗೀಕಾರಾರ್ಹತೆಯನ್ನು ಅನುಮತಿಸುವುದಾದರೆ, ಅದಕ್ಕೆ ಪರಿಣಾಮಕಾರಿಯಾಗುವಂತೆ ವಿಶ್ವವಿದ್ಯಾನಿಲಯವು ರೂಪಿಸಿದ ನಿಯಮಗಳು ಮತ್ತು ವಿನಿಯಮಗಳಿಗೆ ಸಂಬಂಧಿಸಿದಂತೆ ಸಿಂಡಿಕೇಟು ಅದನ್ನು ಪರಿಶೀಲಿಸಬೇಕಾಗುತ್ತದೆ. ಮೇಲೆ ವಿವರಿಸಲಾದ ಸಂದರ್ಭಗಳ ಸನ್ನಿವೇಶವು 5 ವರ್ಷಗಳವರೆಗೆ ಅರ್ಜಿದಾರನನ್ನು ಮಾರ್ಗದರ್ಶಿತ್ವವನ್ನು ಅಮಾನತುಗೊಳಿಸುವಾಗ ಎದುರುದಾರರು ವಿನಿಯಮಗಳ ಮೇರೆಗೆ ನಿಯಮಿಸಲಾದ ಪ್ರಕ್ರಿಯೆಯನ್ನು, ಅನುಸರಿಸಿಲ್ಲವೆಂಬುದನ್ನು ರುಜುವಾತುಪಡಿಸುತ್ತದೆ.

19. ಈ ಎಲ್ಲಾ ಸನ್ನಿವೇಶಗಳನ್ನು, ನ್ಯಾಯಾಲಯವು, ವಿನಿಯಮಗಳ ಮೇರೆಗೆ ನಿಯಮಿಸಲಾದ ಪ್ರಕ್ರಿಯೆಯನ್ನು ಅನುಸರಿಸಿದ ನಂತರ ಕಾನೂನಿಗನುಸಾರವಾಗಿ ಅದನ್ನು ಪರಿಗಣಿಸಲು ಎದುರುದಾರರಿಗೆ ವಿಷಯುವನ್ನು ಕಳುಹಿಸಲು ಇದು ಯುಕ್ತವಾದುದು ಎಂಬ ಅಭಿಪ್ರಾಯವನ್ನು ಪರಿಗಣಿಸಿದೆ. ಆದುದರಿಂದ ಅನುಬಂಧ–ಎ ನ ಪ್ರಶ್ನಿತ ಆದೇಶವನ್ನು ಮತ್ತು ಅನುಬಂಧ–ಎಸ್2 ರಲ್ಲಿ

ದಿನಾಂಕ 19.06.2015 ರ ಮತ್ತು ಅನುಬಂಧ–ಡಬ್ಲ್ಯೂ 1 ರಲ್ಲಿನ ದಿನಾಂಕ 19.01.2016 ರ ಸಿಂಡಿಕೇಟ್ ಕೌನ್ಸಿಲ್‌ನ ನಿರ್ಣಯವನ್ನು ರದ್ದುಗೊಳಿಸಿದೆ.

20. ವಿಷಯವನ್ನು ವಿನಿಯಮಗಳಿಗನುಸಾರವಾಗಿ ವಿಷಯವನ್ನು ಮರುಪರಿಗಣಿಸಲು ಎದುರುದಾರರಿಗೆ ಕಳುಹಿಸಲಾಗಿದೆ ಮತ್ತು ಕಾನೂನಿಗನುಸರವಾಗಿ ಯುಕ್ತ ಆದೇಶಗಳನ್ನು ಹೊರಡಿಸತಕ್ಕದ್ದು.

ರಿಟ್ ಅರ್ಜಿಯನ್ನು ಮೇಲಿನ ನಿಬಂಧನೆಗಳಿಗನುಸಾರವಾಗಿ ವಿಲೆ ಮಾಡಲಾಗಿದೆ.

---